ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಹೌದು, ಕೆಲವು ವರ್ಷಗಳಲ್ಲಿ ಮಾತ್ರ ನೀರು ಹರಿಯುವಿಕೆ ಕಡಿಮೆಯಾಗುತ್ತದೆ.

ಆ) ೧) ಎರಡೂ ಕಡೆಯೂ ಮರಳು ಚೀಲಗಳು ಮತ್ತು ಜೇಡಿ ಮಣ್ಣನ್ನು ಹೊಂದಿರುವ ತಾತ್ಕಾಲಿಕ ಒಡ್ಡನ್ನು ನಿರ್ಮಿಸಿ ಜಲಸಂಗ್ರಹಣೆ ಮಾಡಿ ನೀರು ಸರಬರಾಜು ಮಾಡಲಾಗುತ್ತಿದೆ.

೨) ಶಾಶ್ವತ ಪರಿಹಾರಕ್ಕಾಗಿ ಹಲಗೆಗಳಿರುವ ಕಾಮಗಾರಿಯನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದು, ತನಿಖಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

SRI BLASIUS M D. 'SOUZA.—Mr Speaker, last year, due to the closure of M.C.F. Water was diverted to Mangalore Corporation and so we had some water. This year M.C.F. has already installed the generators and they are working 12 months a year. With this temporary arrangements, they will not be able to pump water to the city. Secondly the Karnataka Urban Water Supply and Drainge Board has also been able to pump 9 to 18 million gallons. As it stands to-day, they are not able to pump 9 million gallons during lean periods. I would like to know from the Hon. Minister the Estimated Cost of the Vented Dam proposed and whether there is any provision in the budget for the proposed Dam?

SRI A. LAKSHMISAGAR.—My learned friend is anxious to know whether it would be possible as a permanent source of water to Mangalore City. But this propasal is however kept in abeyance in view of the proposal to construct a barrage at Sarpadi across Nethravathi river, which will supply water to Mangalore Oil and Refineries, Mangalore City Corporation and other industries, in addition to the generation of power and irrigation. This barrage costing Rs. 19.60 crores would ensure supply of 18 MGD to the City and other consumers without any decrease in the summer. This is also being examined. The Hon. member need not be anxious about it.

SRI BLASIUS M. D'SOUZA.—I would like to know when the investigation for this project will be over for the Dam work to start?

SRI A. LAKSHMISAGAR.—They are being investigated but efforts will be made during summer so that they will be able to get sufficient quantity of water.

ಸುಳ್ಯ ತಾಲ್ಲೂಕಿನಲ್ಲಿ ಜನತಾ ಮನೆಗಳು

೯೫೬. ಶ್ರೀ ಕೆ. ಕುಶಾಲ (ಸುಳ್ಯ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಸತಿ ಮತ್ತು ಸಾರಿಗೆ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ?

ಅ) ೧೯೮೫ ರಿಂದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ನಿರ್ಮಾಣವಾದ ಜನತಾ ಮನೆಗಳ ಸಂಖ್ಯೆ ಎಷ್ಟು?

ಆ) ಈ ಜನತಾ ಮನೆಗಳು ನಿರ್ಮಾಣವಾದ ಮೇಲೆ ಅವುಗಳ ದುರಸ್ತಿ ಕಾರ್ಯವು ನಡೆದಿದೆಯೆ? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ಹಾಳಿ ದುಸ್ಥಿತಿಯಲ್ಲಿರುವ ಜನತಾ ಮನೆಗಳನ್ನು ದುರಸ್ತಿಗೊಳಿಸಲು ಯಾವ ಕ್ರಮವನ್ನು ತೆಗೆದುಕೊಳ್ಳಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಪಸತಿ ಮಂತ್ರಿ ಸಾರಿಗೆ ರಾಜ್ಯ ಸಚಿವರು) —

ಆ) ೩೮೯ ಮನೆಗಳು ಪೂರ್ಣಗೊಂಡಿವೆ.

ಆ) ಜನತಾ ಮನೆಗಳು ನಿರ್ಮಾಣವಾದ ಮೇಲೆ ಅವುಗಳ ದುರಸ್ತಿ ಕೆಲಸವು ಫಲಾನುಭವಿಗಳ ಜವಾಬ್ದಾರಿಯಾದುದರಿಂದ ಅವುಗಳ ದುರಸ್ತಿ ಕೆಲಸವನ್ನು ಸರ್ಕಾರದ ವತಿಯಿಂದ ಮಾಡಲಾಗಿಲ್ಲ.

ಇ) ಉದ್ಭವಿಸದು, ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಎನ್.ಆರ್. ಇ.ಪಿ. ಯೋಜನೆಯಡಿಯಲ್ಲಿ ಮನೆಗಳ ದುರಸ್ತಿ ಕಾರ್ಯಮಾಡಿಸಲು ಜಿಲ್ಲಾಧಿಕಾರಿಗಳಿಗೆ ಪರ್ಯಾಲೋಚಿಸುವಂತೆ ತಿಳಿಸಲಾಗಿದೆ.

ಶ್ರೀ ಕೆ. ಕುಶಾಲ.—೧೯೭೨ನೇ ಇಸವಿಯಿಂದ ೧೯೮೨ರವರೆಗೆ ಜನತಾ ಮನೆಗಳನ್ನು ಕಂಟ್ರಾಕ್ಟ್ ಮೂಲಕ ಕಟ್ಟಿಸುತ್ತಿದ್ದರು. ಆದರೆ ೧೯೮೨ರಿಂದೀಚೆಗೆ ಫಲಾನುಭವಗಳೇ ಆ ಮನೆಗಳನ್ನು ಕಟ್ಟಿಕೊಳ್ಳಬೇಕೆಂಬ ಸರ್ಕಾರದ ಆದೇಶದ ಮೇರೆಗೆ ಅವರೇ ಕಟ್ಟಿಕೊಳ್ಳುತ್ತಿದ್ದಾರೆ. ಆ ಜನತಾ ಮನೆಗಳು ಚೆನ್ನಾಗಿವೆ. ಆದರೆ ೧೯೮೨ಕ್ಕಿಂತ ಮೊದಲು ಕಂಟ್ರಾಕ್ಟ್‌ದಾರರಿಂದ ಕಟ್ಟಿದಂತಹ ಜನತಾ ಮನೆಗಳು ಬೀಳುವಂತಹ ಪರಿಸ್ಥಿತಿಯಲ್ಲಿವೆ. ಅವರು ಕೆಟ್ಟ ಕಟ್ಟಿಗೆಗಳನ್ನು ಹಾಕಿದ್ದಾರೆ. ಕೆಟ್ಟ ಹೆಂಚುಗಳನ್ನೂ ಕೂಡ ಹಾಕಿದ್ದಾರೆ. ಅವುಗಳೆಲ್ಲವೂ ಬಿದ್ದು ಹೋಗುವ ಸಂಭವ ಇದೆ. ಸಾಲದ ಕಂತನ್ನೂ ಕೂಡ ಸರ್ಕಾರ ವಸೂಲಿ ಮಾಡುತ್ತಿಲ್ಲ. ಅವರು ಕಂತಿನ ಹಣವನ್ನೂ ಸಹ ಕೊಡುವಂತಹ ಸ್ಥಿತಿಯಲ್ಲೂ ಇಲ್ಲ. ಜನತಾ ಮನೆಗಳಲ್ಲಿ ಯಾರೋ ದಾರಿ ಹೋಕರು ವಾಸವಾಡುತ್ತಿದ್ದಾರೆ. ಆದರೆ ಕೆಲವರು ಕಾಯಂ ಆಗಿ ಇದ್ದಾರೆ. ಬಿದ್ದು ಹೋಗುವಂತಹ ಪರಿಸ್ಥಿತಿಯಲ್ಲಿರುವ ಮನೆಗಳಲ್ಲಿ ವಾಸವಾಗಿರುವ ಜನರು ಒಂದು ವೇಳೆ ಆ ಮನೆಗಳು ಬಿದ್ದು ಹೋದರೆ ಪ್ರಾಣ ಹಾನಿ ಕೂಡ ಆಗುತ್ತವೆ. ಅದನ್ನು ತಪ್ಪಿಸುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಎಲ್ಲ ಜನತಾ ಮನೆಗಳು ಬಿದ್ದು ಹೋದರೆ ಸರ್ಕಾರದಿಂದ ಅವುಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ವಾಸವಾಗಿರತಕ್ಕ ಜನತಾ ಮನೆಗಳು ಒಂದು ವೇಳೆ ಬಿದ್ದು ಹೋಗಿದ್ದರೆ ಅವುಗಳನ್ನು ರೀಪೇರಿ ಮಾಡುವುದಕ್ಕೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ೨೬-೭-೮೫ರಲ್ಲಿ ಸೂಚನೆಯನ್ನು ರಾಜ್ಯಾದ್ಯಂತ ಕೊಟ್ಟಿದ್ದೇವೆ.

ಶ್ರೀ ಕೆ. ಕುಶಾಲ.—ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮಾತ್ರ ಏಕೆ ಈ ಅನುಕೂಲ? ಹಿಂದುಳಿದ ಜನರು ಯಾರು ಇದ್ದಾರೆ ಅವರಿಗೂ ಇದೇ ಅನುಕೂಲವನ್ನು ಒದಗಿಸಿ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಪ್ರಶ್ನೆ ನಂ. ೪೫೯ (೪೫೬) ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲ್‌ರವರು ಸಭೆಯಲ್ಲಿ ಹಾಜರಿಲ್ಲ.

ಆನೇಕಲ್ ತಾಲ್ಲೂಕಿನ ಸರ್ಜಾಪುರದಲ್ಲಿ ಬಸ್ಸು

೪೬೪. ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಾರಿಗೆ ಹಾಗೂ ಪಸತಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಆ) ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು ಸರ್ಜಾಪುರದ ಬಸ್ಸು ನಿಲ್ದಾಣದಲ್ಲಿ ಪ್ರಯಾಣಿಕರು ಆಶ್ರಯವಿಲ್ಲದೆ ಮಳೆ, ಬಿಸಿಲಿನಿಂದ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?